ಆ) ತಾಲ್ಲೂಕಿನಲ್ಲಿ ೨ ಇವೆ ಮತ್ತು ಜಿಲ್ಲೆಯಲ್ಲಿ ೧೭ ಇವೆ.

ಇ) ೩ ಕೇಂದ್ರಗಳಿಗೆ ಜಿಲ್ಲಾಪರಿಷತ್ತಿನಿಂದ ಪ್ರಸ್ತಾವನೆ ಬಂದಿದ್ದು ೧೯೯೨-೯೩ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು

ಈ) ೧೯೯೨-೯೩ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಬಿ. ಬಸವಲಿಂಗಪ್ಪ (ಪರಿಸರ ಮತ್ತು ತಂತ್ರಜ್ಞಾನ ಖಾತೆ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ ೧೮.೩.೯೨ನೇ ತಾರೀಖಿನಂದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ೧೮ನೇ ಪಟ್ಟಿಯಲ್ಲಿರುವ ೪೦ ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ ೬೯೦, ೧೨೬೬, ೧೩೩೬, ೧೬೩೮, ೧೬೪೦, ೧೯೨೩, ೨೦೦೪, ೧೪೨೫, ೧೯೭೭, ೧೯೮೧ ಮತ್ತು ೧೩೭೦ ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ ೨೯ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ದತ್ತಿ ಕಮಿಷನರ್ ಇಲ್ಲದೆ ತೊಂದರೆ.

೧೨೪೬(೨೧೪೭) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಧಾರ್ಮಿಕ ದತ್ತಿ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬೆಳಗಾವಿ ಜಿಲ್ಲೆಯಲ್ಲಿ ದತ್ತಿ ಕಮಿಷನರು ಇಲ್ಲದೆ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ದತ್ತಿ ಕಮಿಷನರ್‌ರವರನ್ನು ನೇಮಕ ಮಾಡಲಾಗುವುದು;

ಇ) ಈಗ ಎಂದಿನಿಂದ ಈ ಹುದ್ದೆ ಖಾಲಿ ಇರುವುದು ಮತ್ತು ಈಗ ದತ್ತಿ ಕಮಿಷನರ್ ಇಲ್ಲದೇ ಇರುವಾಗ ಅವರ ಕೆಲಸವನ್ನು ಯಾರು ಮಾಡುತ್ತಿರುವರು;

ಈ) ಪ್ರಭಾರ ದತ್ತಿ ಕಮೀಷನರ್‌ಗೆ ಚೆಕ್ ಸಹಿ ಮಾಡುವ ಅಧಿಕಾರ ಇಲ್ಲದೇ ಇರುವುದರಿಂದ ಜನರಿಗೆ ಹಣವನ್ನು ಬಿಡುಗಡೆ ಮಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):-

ಅ) ಹೌದು.

ಆ) ಜಿಲ್ಲಾ ನ್ಯಾಯಾಧೀಶರ ಕೇಡರ್ ಇರುವವರನ್ನು ಮಾತ್ರ ಬಿ. ಪಿ. ಟಿ. ಕಾಯ್ದೆಯ ಅನ್ವಯ ಚಾರಿಟೀ ಕಮೀಷನರ್ ಆಗಿ ನೇಮಿಸಬೇಕಿರುತ್ತದೆ. ಅದರಂತೆ ರಾಜ್ಯ ಉಚ್ಚ ನ್ಯಾಯಾಲಯದವರು ಒಬ್ಬ ಜಿಲ್ಲಾನ್ಯಾಯಾಧೀಶರ ಸೇವೆಯನ್ನು ರಾಜ್ಯ ಸರ್ಕಾರಕ್ಕೆ ನಿಯೋಜನೆ ಮೇರೆ ಬಿಟ್ಟು ಕೊಟ್ಟು ನಂತರ ಸರ್ಕಾರವು ಪುನಃ ಅದನ್ನು ಸದರಿ ಕಾಯ್ದೆ ಸೆಕ್ಷನ್ ೩ರ ಪ್ರಕಾರ ಚಾರಿಟಿ ಕಮೀಷನರ್ ಎಂದು ನೇಮಕ ಮಾಡುತ್ತದೆ.

ಇ) ದಿನಾಂಕ ೧-೨-೧೯೯೧ರಿಂದ ಖಾಲಿ ಇರುತ್ತದೆ. ಸಹಾಯಕ ಚಾರಟಿ ಕಮೀಷನರ್